ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಬುದ್ಧಿಮಾಂದ್ಯ/ಅಂಗವಿಕಲ ಮಕ್ಕಳನ್ನು ನೋಡಿಕೊಳ್ಳಲು ರಾಜ್ಯ ಸರ್ಕಾರಿ ಮಹಿಳಾ ನೌಕರರಿಗೆ 'ಶಿಶುಪಾಲನಾ ರಜೆ' ಮಂಜೂರು ಮಾಡುವ ಬಗ್ಗೆ.**

******

**ಪ್ರಸ್ತಾವನೆ:-**

ನ್ಯೂನ್ಯತೆಯುಳ್ಳ ವಿಶೇಷ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಿದ್ದು, ಆಗಿಂದಾಗ್ಗೆ ವಿವಿಧ ರೋಗಗಳಿಗೆ ತುತ್ತಾಗುವುದರಿಂದ ಅಂತಹ ಮಕ್ಕಳ ಆರೈಕೆಗಾಗಿ ಹಾಗೂ ಅಂಥ ಮಗುವಿನ ನಡೆವಳಿಕೆಯನ್ನು ತಿದ್ದಿ ಉತ್ತಮಪಡಿಸಲು,ಮಗುವಿನಲ್ಲಿ ಮನೋಸ್ಥೈರ್ಯವನ್ನು ತುಂಬಲು ಅಲ್ಲದೆ, ಪುನರ್ವಸತಿಗಾಗಿ ಹಾಗೂ ಕಲಿಕೆಯ ನೈಪುಣ್ಯತೆಗಾಗಿ ತಾಯಿಂದಿರ ಪೋಷಣೆ ಅವಶ್ಯಕತೆ ಬಹಳವಿದ್ದು, ಅಂತಹ ವಿಶೇಷ ಮಕ್ಕಳನ್ನು ನೋಡಿಕೊಳ್ಳಲು ಇತರರಿಗೆ ಕಷ್ಟಸಾಧ್ಯವಾಗಿರುತ್ತದೆ ಮತ್ತು ಅನಾರೋಗ್ಯದ ಸಮಸ್ಯೆಯಿಂದ ಅವರನ್ನು ಬೇರೆಲ್ಲೂ ಬಿಡಲು ಸಾಧ್ಯವಾಗುವುದಿಲ್ಲ. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಸರ್ಕಾರಿ ನೌಕರಿಗೆ , ತಮ್ಮ ಅಂಗವಿಕಲ/ಬುದ್ಧಿಮಾಂದ್ಯ ಇಂತಹ ವಿಶೇಷ ಮಕ್ಕಳ ಪಾಲನೆಗಾಗಿ 'ಶಿಶು ಪಾಲನಾ ರಜೆ' ಸೌಲಭ್ಯವನ್ನು ನೀಡಲು ಸರ್ಕಾರವು ನಿರ್ಧರಿಸಿ, ಈ ಕೆಳ ಕಂಡಂತೆ ಆದೇಶ ಹೊರಡಿಸಲು ಹರ್ಷಿಸುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ:ಆಇ 1 ಸೇನಿಸೇ 2011, ಬೆಂಗಳೂರು,**
**ದಿನಾಂಕ: 29.6.2011**

The Person with Disabilities (Equal Opportunities, Protection of Rights and Full Partipitation) ACT, 1995 ಮತ್ತು The National Trust for Welfare of persons with Autism, Cerebral Palsy, Mental retardation, Multiple disabilities ACT,1999 ಗಳಡಿಯಲ್ಲಿ ಸೂಚಿತವಾಗಿರುವ Autism, Blindness,Mental Illness ,Cerebral Palsy,Mental retardation & Multiple disabilities ಉಳ್ಳ ವಿಶೇಷ ಮಕ್ಕಳನ್ನು ನೋಡಿಕೊಳ್ಳಲು ಅವರ ತಾಯಿಗೆ ಮಾತ್ರ

Kiran Raghupathi

**(ಮಹಿಳಾ ಸರ್ಕಾರಿ ನೌಕರರಿಗೆ)** **ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರದ ಆಧಾರದ ಈ** ಕೆಳಕಂಡ ಷರತ್ತುಗಳ ಮೇರೆಗೆ ಒಂದು ವರ್ಷದಲ್ಲಿ ಮೂರು ಕಂತುಗಳಿಗೆ ಮೀರದಂತೆ ಹಾಗೂ 15 ದಿನಗಳಿಗೆ ಕಡಿಮೆ ಇಲ್ಲದಂತೆ ಇಡೀ ಸೇವಾವಧಿಯಲ್ಲಿ ಎರಡು ವರ್ಷಗಳ ಅವಧಿಗೆ ಅಂದರೆ ಒಟ್ಟು 730 ದಿನಗಳ **'ಶಿಶುಪಾಲನಾ ರಜೆ'** ಯನ್ನು ,ರಜೆಯನ್ನು ಮಂಜೂರು ಮಾಡುವ ಸಕ್ಷಮವಾದ ಪ್ರಾಧಿಕಾರವು ಮಂಜೂರು ಮಾಡತಕ್ಕದ್ದು.

i) ಯಾವ ಮಹಿಳಾ ಸರ್ಕಾರಿ ನೌಕರಳು, ಮೇಲ್ಕಂಡ ಆಕ್ಟ್,ಗಳಡಿಯಲ್ಲಿ ರುವ ಅಂಗವಿಕಲ/ಬುದ್ಧಿಮಾಂದ್ಯ ವಿಶೇಷ ಮಕ್ಕಳನ್ನು ಹೊಂದಿದ್ದು, ಇಂಥ ಮಕ್ಕಳ ಆರೈಕೆಗಾಗಿ ಹಾಗೂ ಅಂಥ ಮಗುವಿನ ನಡೆವಳಿಕೆಯನ್ನು ತಿದ್ದಿ ಉತ್ತಮಪಡಿಸಲು,ಮಗುವಿನಲ್ಲಿ ಮನೋಸ್ಥೈರ್ಯವನ್ನು ತುಂಬಲು ಅಲ್ಲದೆ, ಪುನರ್ವಸತಿಗಾಗಿ ಹಾಗೂ ಕಲಿಕೆಯ ನೈಪುಣ್ಯತೆಗಾಗಿ ತಾಯಿಂದಿರ ಪೋಷಣೆ ಇಡೀ ಅವಳ ಸೇವಾವಧಿಯಲ್ಲಿ ಎರಡು ವರ್ಷಗಳ ಅವಧಿಗೆ ಅಂದರೆ ಒಟ್ಟು 730 ದಿನಗಳು ಮೀರದಂತೆ, ವೈದ್ಯಕೀಯ ಪತ್ರದ ಆಧಾರದ ಮೇಲೆ 'ಶಿಶುಪಾಲನಾ ರಜೆ'ಯನ್ನು ಮಂಜೂರು ಮಾಡತಕ್ಕದ್ದು.

ii) ಮಹಿಳಾ ನೌಕರರು ತಮ್ಮ ಎರಡು ಜೀವಂತ ಮಕ್ಕಳಿಗೆ ಮಾತ್ರ ಇಂಥ ರಜೆಯ ಕೋರಿಕೆಯನ್ನು ಸಲ್ಲಿಸಬಹುದು ಮತ್ತು ಆ ಮಕ್ಕಳಿಗೆ 18 ವರ್ಷ ಮೀರಿರಬಾರದು.

iii) ಇಂಥ ರಜೆಯ ಅವಧಿಯಲ್ಲಿ ಅವಳಿಗೆ, ಅವಳ ರಜೆಯ ಮೇಲೆ ಹೋಗುವ ನಿಕಟ ಪೂರ್ವದಲ್ಲಿ ಆಕೆ ಪಡೆಯುತ್ತಿದ್ದ ವೇತನಕ್ಕೆ ಸಮನಾದ ರಜಾ ವೇತನವನ್ನು ನೀಡತಕ್ಕದ್ದು.

iv) ಇಂಥ ರಜೆಯನ್ನು ಗಳಿಕೆ ರಜೆಯ ಲೆಕ್ಕಕ್ಕೆ ಸೇರಿಸಲು ಅವಕಾಶವಿಲ್ಲ. ಇಂಥ ರಜೆಯನ್ನು ಪಡೆಯಲು ಅರ್ಜಿದಾರರಿಗೆ ನಿಯಮಾನುಸಾರ ಲಭ್ಯವಿರುವ ಯಾವುದೇ ರಜೆಯ ಜೊತೆಗೆ ಸಂಯೋಜಿಸ ಬಹುದಾಗಿದೆ ಹಾಗೂ ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ರಜೆಯ ಅವಶ್ಯವಿದ್ದಲ್ಲಿ ಅಸಾಧಾರಣ ರಜೆಯನ್ನು ಸಹ ಮಂಜೂರು ಮಾಡಬಹುದಾಗಿದೆ.

v) ಇಂಥ ರಜೆಯು ಒಂದು ಕ್ಯಾಲೆಂಡರ್ ವರ್ಷದಲ್ಲಿ ಮೂರು ಬಾರಿಗಿಂತ ಮೀರಬಾರದು ಮತ್ತು ಇಂಥ ರಜೆಯು ಪ್ರತಿ ಬಾರಿ 15 ದಿನಗಳಿಗಿಂತ ಕಡಿಮೆ ಇರಬಾರದು.

Kiran Raghupathi

vi) ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ, ಪರಿವೀಕ್ಷಣಾವಧಿ ಅವಧಿಯಲ್ಲಿನ ಮಹಿಳಾ ನೌಕರರಿಗೆ ಇಂಥಹ ರಜೆಯನ್ನು ಮಂಜೂರು ಮಾಡತಕ್ಕದ್ದಲ್ಲ.

vii) ಪ್ರತಿಯೊಂದು ಇಂಥಹ ರಜೆಯ ಅವಧಿಯ ಮಂಜೂರಾತಿಗೆ ಅಂಗವಿಕಲ/ಬುದ್ಧಿಮಾಂದ್ಯ ಬಳಲುತ್ತಿರುವ ಬಗ್ಗೆ ಮಹಿಳಾ ಸರ್ಕಾರಿ ನೌಕರರು ಜಿಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು/ ಜಿಲ್ಲಾ ವೈದ್ಯಕೀಯ ಮಂಡಳಿ ನೀಡುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

viii) ಈ ರಜೆಯನ್ನು ಮಂಜೂರು ಮಾಡುವ ಸಕ್ಷಮವಾದ ಪ್ರಾಧಿಕಾರವು ಶಿಶುಪಾಲನಾ ರಜೆಯ ಮಂಜೂರಾತಿಯನ್ನು ಸೇವಾ ಪುಸ್ತಕದಲ್ಲಿ ದಾಖಲು ಮಾಡುವುದು ಮತ್ತು ನಿಗದಿತ ನಮೂನೆಯಲ್ಲಿ ಲೆಕ್ಕವಿಡಬೇಕು. ನಿಗಧಿತ ನಮೂನೆಯನ್ನುಈ ಆದೇಶಕ್ಕೆ ಲಗತ್ತಿಸಲಾಗಿದೆ.

ಈ ಬಗ್ಗೆ ಕ.ನಾ.ಸೇ.ನಿಯಮಾವಳಿಗಳಿಗೆ ಪ್ರತ್ಯೇಕವಾಗಿ ಸೂಕ್ತ ತಿದ್ದುಪಡಿ ತರಲಾಗುವುದು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ.ನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-1).

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 100 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

<u>ಇವರಿಗೆ:</u>

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ.
2. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು/ವಿಶೇಷ ಕಾರ್ಯದರ್ಶಿಗಳು ಅಪರ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳಿಗೆ ಹಾಗೂ ಅಧೀನ ಕಾರ್ಯದರ್ಶಿಗಳಿಗೆ.
3. ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.

Kiran Raghupathi

# ವಿಶೇಷ ಮಕ್ಕಳ 'ಶಿಶುಪಾಲನಾ ರಜೆ'ಯ ಲೆಕ್ಕವನ್ನಿಡಲು ಪ್ರಪತ್ರ

(ದಿ: 29-6-2011ರ ಆಇ 1 ಸೇನಿಸೇ 2011ರ ಆದೇಶಕ್ಕೆ ಅನುಬಂಧ)

| ಕ್ರಮ ಸಂಖ್ಯೆ Sl.No | ತೆಗೆದುಕೊಂಡ ಶಿಶುಪಾಲನಾ ರಜೆಯ ಅವಧಿ Period of Leave taken for child caring | | ಬಾಕಿ ಉಳಿದಿರುವ ಶಿಶುಪಾಲನಾ ರಜೆ Balance of Child Caring Leave | | ರಜೆ ಮಂಜೂರು ಮಾಡಿರುವ ಸಕ್ಷಮ ಪ್ರಾಧಿಕಾರಿಯ ಸಹಿ ಮತ್ತು ಮೊಹರು Sign and seal of concerned officer |
|---|---|---|---|---|---|
| | ಯಿಂದ From | ಇಲ್ಲಿಯವರೆಗೆ To | ಬಾಕಿ Balance | ದಿನಾಂಕ Date | |
| 1 | | | | | |
| 2 | | | | | |
| 3 | | | | | |
| 4 | | | | | |
| 5 | | | | | |
| 6 | | | | | |

ಪಿ. ನಾರಾಯಣ 29/6
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-1)

Kiran Raghupathi

**ಆರ್ಥಿಕ ಸಚಿವಾಲಯ**

ಸಂಖ್ಯೆ: ಆಇ 1 ಸೇನಿಸೇ 2011,ಬೆಂಗಳೂರು, ದಿನಾಂಕ:19.8.2011.

**ತಿದ್ದುಪಡಿ**

ಸರ್ಕಾರಿ ಆದೇಶ ಸಂಖ್ಯೆ: ಆಇ 1 ಸೇನಿಸೇ 2011 ದಿನಾಂಕ:29.06.2011ರ ಆದೇಶ ಭಾಗದಲ್ಲಿನ ಷರತ್ತು (vii) ರ ಬದಲಾಗಿ ಈ ಕೆಳಕಂಡಂತೆ ಪ್ರತಿಸ್ಥಾಪಿಸಲಾಗಿದೆ:-

vii). ಯಾವ ಪ್ರಕರಣದಲ್ಲಿ ಮಕ್ಕಳು ಗುಣಮುಖವಾಗದ ಮತ್ತು ಶಾಶ್ವತವಾಗಿ ಅಂಗವಿಕಲ/ಬುದ್ಧಿಮಾಂದ್ಯದಿಂದ ಬಳಲುತ್ತಿದ್ದಾರೆ ಮತ್ತು reassement is not required ಎಂದು ವೈದ್ಯಕೀಯ ಮಂಡಳಿಯು ಪ್ರಮಾಣಿಕರಿಸಿದೆಯೋ ಅಂತಹ ಪ್ರಕರಣಗಳಲ್ಲಿ ಮಹಿಳಾ ಸರ್ಕಾರಿ ನೌಕರರು, ವೈದ್ಯಕೀಯ ಮಂಡಳಿ ನೀಡುವ ವೈದ್ಯಕೀಯ ಮೂಲ ಪ್ರಮಾಣ ಪತ್ರವನ್ನು ಐದು ವರ್ಷಕ್ಕೆ ಒಮ್ಮೆ ಸಲ್ಲಿಸಿ, ಆ ಐದು ವರ್ಷದ ಅವಧಿಯಲ್ಲಿ ಕಂಡಿಕೆ v ರನ್ವಯ ಒಂದು ವರ್ಷಕ್ಕೆ ಮೂರು ಬಾರಿ ರಜೆ ಮಂಜೂರು ಮಾಡಿಸಿಕೊಳ್ಳಬಹುದಾಗಿದೆ. ಯಾವ ಪ್ರಕರಣದಲ್ಲಿ ಅಂಗವಿಕಲ/ಬುದ್ಧಿಮಾಂದ್ಯತೆಯಿಂದ ಗುಣಮುಖವಾಗುವ ಸಾಧ್ಯತೆಯಿದೆ ಮತ್ತು reassement is required ಎಂದು ವೈದ್ಯಕೀಯ ಮಂಡಳಿಯು ಪ್ರಮಾಣಿಕರಿಸಿದೆಯೋ ಅಂತಹ ಪ್ರಕರಣಗಳಲ್ಲಿ ವೈದ್ಯಕೀಯ ಮಂಡಳಿ ನೀಡುವ ವೈದ್ಯಕೀಯ ಮೂಲ ಪ್ರಮಾಣ ಪತ್ರವನ್ನು ವರ್ಷಕ್ಕೆ ಒಂದು ಬಾರಿ ಸಲ್ಲಿಸಿ, ಆ ಒಂದು ವರ್ಷದ ಅವಧಿಯಲ್ಲಿ ಕಂಡಿಕೆ v ರನ್ವಯ ಮೂರು ಬಾರಿ ರಜೆ ಮಂಜೂರು ಮಾಡಿಸಿಕೊಳ್ಳಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Alice Gonsalves 19/8/2011

(ಆಲಿಸ್ ಗೊನ್ಸಾಲ್ವಿಸ್)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ಆರ್ಥಿಕಇಲಾಖೆ(ಸೇವೆಗಳು-1)

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 100 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1.ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ.
2.ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು/ವಿಶೇಷ ಕಾರ್ಯದರ್ಶಿಗಳು

Kiran Raghupathi

# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಮನೋವೈಕಲ್ಯತೆಯಿಂದ ಬಳಲುತ್ತಿದ್ದು (Autism, Cerebral Palsy or Mental retardation ) ವಿಶೇಷ/ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳಿರುವ ರಾಜ್ಯ ಸರ್ಕಾರಿ ನೌಕರರಿಗೆ ಶಿಕ್ಷಣ ಭತ್ಯೆಯ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012 (XIII), ದಿ: 10-6-2013

ಪ್ರಸ್ತಾವನೆ:

ಉಲ್ಲೇಖ (1)ರಲ್ಲಿ ಓದಲಾದ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012 (XIII), ದಿನಾಂಕ: 10-6-2013 ರಲ್ಲಿ ವಿಶೇಷ ಸಂಯೋಜಿತ ಅಥವಾ ಸಾಮಾನ್ಯ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಹನ್ನೆರಡನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಮತ್ತು ಗರಿಷ್ಠ 18 ವರ್ಷಗಳ ವಯೋಮಿತಿ ಮೀರದ ರಾಜ್ಯ ಸರ್ಕಾರಿ ನೌಕರರ ಅವಲಂಬಿತ ಅಂಧ ಮತ್ತು ಚಲನ ವೈಕಲ್ಯತೆ ಹೊಂದಿರುವ ಮಕ್ಕಳಿಗೆ ಶಿಕ್ಷಣಕ್ಕಾಗಿ ಒಂದು ಮಗುವಿಗೆ ಮಾಸಿಕ ತಲಾ ರೂ.500/- ರಂತೆ ಗರಿಷ್ಠ ಎರಡು ಮಕ್ಕಳಿಗೆ ಶಿಕ್ಷಣ ಭತ್ಯೆಯನ್ನು ಅದರಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರಿ ನೌಕರರಿಗೆ ಹಿಂಬರಿಸಲು ಆದೇಶಿಸಿದೆ.

ದಿನಾಂಕ: 10-6-2013ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012 (XIII) ರಲ್ಲಿ ಒಳಗೊಂಡಿರುವ ಶಿಕ್ಷಣ ಭತ್ಯೆಯ ಸೌಲಭ್ಯವನ್ನು ಮನೋವೈಕಲ್ಯತೆಯಿಂದ ಬಳಲುತ್ತಿದ್ದು (Autism, Cerebral Palsy or Mental retardation) , ವಿಶೇಷ ಸಂಯೋಜಿತ (Integrated) ಅಥವಾ ಸಾಮಾನ್ಯ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಹನ್ನೆರಡನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ರಾಜ್ಯ ರಾಜ್ಯ ಸರ್ಕಾರಿ ನೌಕರರ ಅವಲಂಬಿತ ಮಕ್ಕಳ ಶಿಕ್ಷಣಕ್ಕೂ ನೀಡಬೇಕೆಂಬ ಕೋರಿಕೆಯನ್ನು ಪರಿಶೀಲಿಸಿ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 35 ಎಸ್‌ಆರ್‌ಪಿ 2016,**
**ಬೆಂಗಳೂರು, ದಿನಾಂಕ: 20-10-2016**

ದಿನಾಂಕ: 10-6-2013ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012 (XIII) ರನ್ವಯ ಲಭ್ಯವಿರುವ ಶಿಕ್ಷಣ ಭತ್ಯೆಯ ಸೌಲಭ್ಯವು ಮನೋವೈಕಲ್ಯತೆಯಿಂದ ಬಳಲುತ್ತಿದ್ದು (Autism, Cerebral Palsy or Mental retardation) , ವಿಶೇಷ ಸಂಯೋಜಿತ (Integrated) ಅಥವಾ ಸಾಮಾನ್ಯ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಹನ್ನೆರಡನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಮತ್ತು ಗರಿಷ್ಠ 18 ವರ್ಷಗಳ ಮಯೋಮಿತಿ ಮೀರದ ರಾಜ್ಯ ಸರ್ಕಾರಿ ನೌಕರರ ಅವಲಂಬಿತ ಮಕ್ಕಳ ಶಿಕ್ಷಣಕ್ಕಾಗಿ ಅನ್ವಯವಾಗುತ್ತದೆ ಎಂದು ಈ ಮೂಲಕ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012 (XIII), ದಿನಾಂಕ: 10-6-2013 ರಲ್ಲಿ ವಿಧಿಸಿರುವ ಇತರೆ ಷರತ್ತು ಮತ್ತು ನಿಬಂಧನೆಗಳು ಮುಂದುವರಿದು ಅನ್ವಯಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಸ್.ರಾಜಲಕ್ಷ್ಮಿ)
**ಸರ್ಕಾರದ ಅಧೀನ ಕಾರ್ಯದರ್ಶಿ**
**ಆರ್ಥಿಕ ಇಲಾಖೆ (ಸೇವೆಗಳು-2)**

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ ಅಪರ ಮುಖ್ಯ ಕಾರ್ಯದರ್ಶಿಗಳು.

..2

Kiran Raghupathi

## ಕರ್ನಾಟಕ ಸರ್ಕಾರ

**ವಿಷಯ:** ಶಾಶ್ವತ ಅಂಗವಿಕಲ/ಬುದ್ಧಿಮಾಂದ್ಯದಿಂದ ಬಳಲುತ್ತಿರುವ ಮಕ್ಕಳನ್ನು ನೋಡಿಕೊಳ್ಳಲು ರಾಜ್ಯ ಸರ್ಕಾರಿ ಮಹಿಳಾ ನೌಕರರಿಗೆ "ಶಿಶುಪಾಲನಾ ರಜೆ" ಮಂಜೂರು ಮಾಡಲು ಇರುವ ನಿರ್ಬಂಧವನ್ನು ಸಡಿಲಿಸುವ ಬಗ್ಗೆ.

**ಓದಲಾಗಿದೆ:** ಸರ್ಕಾರಿ ಆದೇಶ ಸಂಖ್ಯೆ: ಆಇ 1 ಸೇನಿಸೇ 2011, ದಿನಾಂಕ:29.06.2011.

ಪ್ರಸ್ತಾವನೆ:-

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯ ಸರ್ಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಸರ್ಕಾರಿ ನೌಕರರಿಗೆ ತಮ್ಮ ಅಂಗವಿಕಲ/ಬುದ್ಧಿಮಾಂದ್ಯ, ವಿಶೇಷ ಮಕ್ಕಳ ಪಾಲನೆಗಾಗಿ ಕೆಲವು ಷರತ್ತುಗಳೊಂದಿಗೆ ಶಿಶುಪಾಲನಾ ರಜೆಯನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಆದೇಶದಲ್ಲಿನ ಕ್ರಮ ಸಂಖ್ಯೆ(ii) ರಲ್ಲಿ ಸದರಿ ಮಕ್ಕಳಿಗೆ 18ವರ್ಷ ಮೀರಿರಬಾರದು ಎಂಬ ಷರತ್ತನ್ನು ವಿಧಿಸಿದ್ದು, ಸದರಿ ಷರತ್ತನ್ನು ಕೈಬಿಡುವಂತೆ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಭಾರತ ಸರ್ಕಾರವು ವಿಶೇಷ ಮಕ್ಕಳನ್ನು ಹೊಂದಿರುವ ತಾಯಂದಿರ ಪ್ರಕರಣಗಳಿಗೆ ಮಾತ್ರ ಸೀಮಿತಗೊಳಿಸಿ ಗರಿಷ್ಠ 730 ದಿನಗಳಿಗೆ ಮೀರದಿರುವ ನಿಬಂಧನೆಯೊಂದಿಗೆ 18ವರ್ಷಗಳ ಮಿತಿಯನ್ನು ತೆಗೆದು ಹಾಕಿ ಅವಕಾಶ ಕಲ್ಪಿಸಿದ್ದು, ಈ ಅಂಶಗಳನ್ನು ಅವಲೋಕಿಸಿ ರಾಜ್ಯ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 3 (ಇ) ಸೇನಿಸೇ 2019, ಬೆಂಗಳೂರು, ದಿನಾಂಕ:17.10.2019**

ಸರ್ಕಾರಿ ಆದೇಶ ಸಂಖ್ಯೆ: ಆಇ 1 ಸೇನಿಸೇ 2011, ದಿನಾಂಕ:29.06.2011ರಲ್ಲಿನ ಇತರೆ ಷರತ್ತುಗಳು ಯಥಾವತ್ತಾಗಿ ಮುಂದುವರೆಯುವ ನಿಬಂಧನೆಗೊಳಪಟ್ಟು ಕ್ರಮ ಸಂಖ್ಯೆ(ii) ರಲ್ಲಿ ವಿಧಿಸಿರುವ ಷರತ್ತಾದ **" ಮತ್ತು ಆ ಮಕ್ಕಳಿಗೆ 18ವರ್ಷ ಮೀರಿರಬಾರದು"** ಎಂಬ ಷರತ್ತನ್ನು ಕೈಬಿಟ್ಟು ಆದೇಶಿಸಿದೆ.

ಈ ಬಗ್ಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗೆ ಅವಶ್ಯಕ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Suvarna B.S.
(ಬಿ.ಎಸ್.ಸುವರ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-1)

**ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 100 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು ಕೋರಿ ಕಳುಹಿಸಿದೆ.**

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ಎಲ್ಲಾ ಪ್ರಾದೇಶಿಕ ಆಯುಕ್ತರು.
4. ಎಲ್ಲಾ ಇಲಾಖಾ ಮುಖ್ಯಸ್ಥರು/ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.

Kiran Raghupathi